2. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಮನೆಗಳಿಗೆ ಭೇಟಿ ನೀಡಿ, ಗರ್ಭಿಣಿಯನ್ನು ನೋಂದಾಯಿಸಿಕೊಂಡು ಸುರಕ್ಷಿತ ತಾಯ್ತನ ಹಾಗೂ ಶಿಶು ಸಂರಕ್ಷಣೆಗೆ ತಿಳುವಳಿಕೆ ನೀಡುತ್ತಿದ್ದಾರೆ.
3. ಸಮೂಹ ಮಾಧ್ಯಮಗಳಾದ ದೂರದರ್ಶನ, ಆಕಾಶವಾಣಿ, ವಸ್ತುಪ್ರದರ್ಶನ, ಪತ್ರಿಕೆಗಳು ಮತ್ತು ಚಲನಚಿತ್ರ ಪ್ರದರ್ಶನ ಮೂಲಕ ಸಾರ್ವಜನಿಕರಿಗೆ ತಾಯಿ ಮತ್ತು ಮಗುವಿನ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ತಾಯಿ ಮಗುವಿನ ಆರೋಗ್ಯ ಕುರಿತಂತೆ ಕರಪತ್ರ ಮಡಿಕೆ ಪತ್ರ,ಭಿತ್ತಿ ಪತ್ರ ಇತ್ಯಾದಿ ಸಾಹಿತ್ಯಗಳನ್ನು ಹಂಚಲಾಗುತ್ತಿದೆ.

ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ವಾಣಿಜ್ಯ ಪರೀಕ್ಷೆಗಳ ಬಗ್ಗೆ

1023 - ಶ್ರೀ ಕುಂಬ್ಳೆ ಸುಂದರರಾವ್ (ಸರಿ ರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು .ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುತ್ತಿರುವ ವಾಣಿಜ್ಯ ಪರೀಕ್ಷೆಗಳಾದ ಕನ್ನಡ ಮತ್ತು ಇಂಗ್ಲೀಷ್ ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆಗಳಿಗೆ ಕಳೆದ 3 ವರ್ಷಗಳಲ್ಲಿ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ವರ್ಷವಾರು ಫಲಿತಾಂಶಗಳೇನು?

ಆ) ಈ ಪರೀಕ್ಷೆಯ ಮುಖ್ಯ ಪರೀಕ್ಷಕರನ್ನು ಆಯ್ಕೆ ಮಾಡುವಲ್ಲಿ ಅನುಸರಿಸುವ ವಿಧಾನಗಳು ಯಾವುವು? ಆ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆಯೇ? ಇಲ್ಲವಾದಲ್ಲಿ ಕಾರಣಗಳೇನು? (ಮೌಲ್ಯಮಾಪನ ಪ್ರಶ್ನೆಪತ್ರಿಕೆ ತಯಾರಿಕೆ : ಉಕ್ತಲೇಖನ ಓದುಗರು-ಸೇರಿದಂತೆ)

ಇ) ಕಳೆದ ಐದು ವರ್ಷಗಳಲ್ಲಿ ಪರೀಕ್ಷಾ ವಿಷಯ ಪ್ರಮುಖರುಗಳ ಆಯ್ಕೆಯಲ್ಲಿ ಕೆಲವೇ ವ್ಯಕ್ತಿಗಳು ಪುನಃ ಪುನಃ ಆಯ್ಕೆಯಾಗುತ್ತಿರಲು ಕಾರಣಗಳೇನು? ಮಂಡಳಿಗೆ ಅಂಥ ಅರ್ಹ ವ್ಯಕ್ತಿಗಳ ಕೊರತೆ ಇದೆಯೇ?

ಈ) ಇಲ್ಲವಾದಲ್ಲಿ ಅರ್ಹ ವ್ಯಕ್ತಿಗಳೆಲ್ಲರೂ ಅವಕಾಶಗಳನ್ನು ಒದಗಿಸಲು ಕ್ರಮ ಜರುಗಿಸುವರೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಮೂರು ವರ್ಷದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ವರ್ಷವಾರು ಫಲಿತಾಂಶದ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಮುಖ್ಯ ಪರೀಕ್ಷಕರನ್ನು ಆಯ್ಕೆ ಮಾಡುವಲ್ಲಿ ಮಂಡಳಿಯ ನಿಯಮಾನುಸಾರ ವಿಷಯಗಳಲ್ಲಿ ಅತ್ಯಂತ ಹಿರಿಯರನ್ನು ಮುಖ್ಯ ಪರೀಕ್ಷಕರನ್ನಾಗಿ ನೇಮಕ ಮಾಡಲಾಗುತ್ತದೆ. ಒಂದು ಅವಧಿಯಲ್ಲಿ ಮುಖ್ಯ ಪರೀಕ್ಷಕರನ್ನಾಗಿ ನೇಮಕಾಗೊಂಡವರನ್ನು ಮೂರು ವರ್ಷಗಳ ಅವಧಿಯ ಅಂತರದ ನಂತರ ನೇಮಕ ಮಾಡಿಕೊಳ್ಳಲಾಗುತ್ತಿದೆ. ವಾಣಿಜ್ಯ ಪರೀಕ್ಷೆಯು ಮೇ ಹಾಗೂ ನವೆಂಬರ್ ತಿಂಗಳಲ್ಲಿ ನಡೆಯುವುದರಿಂದ ಈ ಎರಡೂ ಪರೀಕ್ಷೆಗಳಿಗೂ ಒಬ್ಬರೇ ಮುಖ್ಯಪರೀಕ್ಷಕರು ಇರುತ್ತಾರೆ.

ಪ್ರಶ್ನೆಪತ್ರಿಕೆ ತಯಾರಿಕೆ ಬಗ್ಗೆ :

ಪ್ರಶ್ನೆಪತ್ರಿಕೆ ತಯಾರಿಸಲು ಆ ವಿಷಯಗಳಲ್ಲಿ ಪರಿಣಿತ ಹೊಂದಿದ ಹಿರಿಯರನ್ನೇ ನೇಮಕ ಮಾಡಿ ಕೊಳ್ಳಲಾಗುತ್ತದೆ. ಕನಿಷ್ಟ ಅವರು10ವರ್ಷಗಳ ಸೇವೆ ಸಲ್ಲಿಸಿದವರಾಗಿರಬೇಕು ಮತ್ತು ನಾಲ್ಕು ಅಥವಾ ಐದು ಬಾರಿ ಸಹಾಯಕ ಪರೀಕ್ಷಕರು ಅಥವಾ ಉಪ ಮುಖ್ಯ ಪರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರಬೇಕು. ಅವರ ವಿದ್ಯಾರ್ಹತೆ ಈ ಕೆಳಗೆ ಕಂಡಂತಿರುತ್ತದೆ.

1. ಪಕದವೀಧರರಾಗಿದ್ದಲ್ಲಿ ಪ್ರೌಢ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ಎಸ್. ಎಸ್. ಎಲ್.ಸಿ. ಪಾಸಾಗಿದ್ದು ಪ್ರವೀಣ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು.

ಉಕ್ತಲೇಖನ ಓದುಗರ ಬಗ್ಗೆ :

ಆಯ್ಕೆ ಸಮಿತಿಯಿಂದ ಆಯ್ಕೆ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ ಉಕ್ತಲೇಖನನ ಓದುಗರನ್ನಾಗಿ ನೇಮಕ ಮಾಡಲಾಗುತ್ತದೆ. ಆಯ್ಕೆ ಸಮಿತಿಯಲ್ಲಿ ಅತ್ಯಂತ ಹಿರಿಯ ವಿಷಯ ತಜ್ಞರು ಇದ್ದು ವಿದ್ಯಾರ್ಥಿಗಳ ಅರ್ಹತೆಗಳನ್ನು ಪರೀಕ್ಷಿಸಿ, ಆಯ್ಕೆ ಪಟ್ಟಿ ತಯಾರಿಸುತ್ತಾರೆ. ಈ ಆಯ್ಕೆ ಪಟ್ಟಿಯನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ಮಾಡಲಾಗುವುದು.

ಈ ನಿಯಮವನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ.

ಉದ್ಭವಿಸುವಉದಿಲ್ಲ.

ಇ) ಇಲ್ಲ.

ಈ) ಹೌದು.

ವಾಣಿಜ್ಯ ಪರೀಕ್ಷೆಗಳಲ್ಲಿ ಕಳೆದ ಮೂರು ವರ್ಷಗಳ ಮತ್ತು ತೇರ್ಗಡೆಯಾದದ ವಿದ್ಯಾರ್ಥಿಗಳ ಪಟ್ಟಿ.

	1993		1994			
ವಿಷಯ	ಪರೀಕ್ಷೆಗೆ ಕುಳಿತವರು	ತೇರ್ಗಡೆ ಯಾದವರು	ಪರೀಕ್ಷೆಗೆ ಕುಳಿತವರು	ತೇರ್ಗಡೆ ಯಾದವರು	ಪರೀಕ್ಷೆಗೆ ಕುಳಿತವರು	ತೇರ್ಗಡೆ ಯಾದವರ
ಆಂಗ್ಲ ಬೆರಳಚ್ಚು	87,671	32,152	73,906	36,642	86,246	44,442
ಕನ್ನಡ ಬೆರಳಚ್ಚು	33,489	21,178	12.674	5,476	33,094	20,810
ಆಂಗ್ಲ ಶೀಘ್ರಲಿಪಿ	7,883	2,095	8,117	3,475	8,542	2,042
ಕನ್ನಡ ಶೀಘ್ರಲಿಪಿ	2,947	1,260	2,740	1,261	2,742	1,258

ಅನಧಿಕೃತವಾಗಿ ಟಿ.ಸಿ. ಹೆಚ್. ಶಾಲೆಗಳು ಪ್ರಾರಂಭವಾಗಿರುವುದರ ಬಗ್ಗೆ

1261 - ಶ್ರೀ ಟಿ. ಹೆಚ್. ಬಸವರಾಜ್ (ಹೊಸದುರ್ಗ) : ಶ್ರೀ ವಿ.ನಂಜಾಮರಿ (ತಿಪಟೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಪಟ್ಟಣ ಹಾಗೂ ತಾಲ್ಲೂಕಿನಲ್ಲಿ ಕಳೆದ 2-3ವರ್ಷಗಳಿಂದ ಅನಧಿಕೃತವಾಗಿ ಟಿ.ಸಿ.ಹೆಚ್. ಶಾಲೆಗಳು ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಶಾಲೆಗಳ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಬಂದಿದೆ.